ವಿಟ್ಲದಲ್ಲಿ ಉಪ-ಕೇಂದ್ರ ಸ್ಥಾಪಿಸುವ ಬಗ್ಗೆ

ಳಿಳಿಳಿ. ಶ್ರೀ ಎ ರುಕ್ಮಯ್ಯ ಪೂಜಾರಿ, (ವಿಟ್ಲ).— ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ವಿಟ್ಲದಲ್ಲಿ ವಿದ್ಯುಚ್ಛಕ್ತಿಯ ಉಪ-ಕೇಂದ್ರದ ಸ್ಥಾಪನೆ ಕೆಲಸವನ್ನು ೧೯೮೯-೯೦ರ ಮುಂಡಳಿಯ ಆಯವ್ಯಯದಲ್ಲಿ ಸೇರಿಸಲಾಗಿದೆಯೇ ?

ಆ) ಸೇರಿಸಿದ್ದರೆ ಕೆಲಸವು ನಿಧಾನ ಗತಿಯಿಂದ ಸಾಗಲು ಕಾರಣವೇನು ?

ಇ) ವಿಟ್ಲದ ಸುತ್ತಮುತ್ತಲು ವಿದ್ಯುತ್‌ನ ಅಭಾವವಿರುವುದರಿಂದ ಉಪ-ಕೇಂದ್ರದ ಕೆಲಸವು ಅತೀ ಜರೂರಾಗಿ ನಡೆಯಲು ಕ್ರಮ ಕೈಗೊಳ್ಳಲಾಗುವುದೇ ?

ಈ) ಈ ಕೆಲಸದ ಕಾರ್ಯ ಪೂರ್ಣಗೊಳ್ಳಲು ಎಷ್ಟು ಕಾಲಾವಕಾಶ ಬೇಕಾಗುವುದು ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

ಅ) —ಹೌದು—

ಆ) ಭೂಮಿ ಸ್ವಾಧೀನ ನಡವಳಿಗಾಗಿ ಬೇಕಾಗಿರುವ ಸಮಯದಿಂದಾಗಿ ಮತ್ತು ವರಾಹಿ ಜಲವಿದ್ಯುತ್ ಯೋಜನೆಯಲ್ಲಿ ಮಂಡಳಿಗೆ ಸಂಬಂಧಿಸಿದ ಕೆಲಸವನ್ನು ನಿರ್ವಹಿಸಲು ಸಿಬ್ಬಂದಿಯನ್ನು ಕಳುಹಿಸಿದ ಕಾರಣದಿಂದಾಗಿ, ಈ ಕೆಲಸವು ನಿಧಾನವಾಯಿತು.

ಇ) ಅಗತ್ಯವಿರುವ ಷವರ್ ವಿದ್ಯುತ್ ಪರಿವರ್ತಕವನ್ನು ಖರೀದಿಸಲು ಕ್ರಯಾದೇಶವನ್ನು ನೀಡಲಾಗಿದೆ ಮತ್ತು ೧೧೦ ಕೆ.ವಿ. ಬ್ರೇಕರ್‌ಗಳನ್ನು ನಿರ್ಮಾಣ ಸ್ಥಳಕ್ಕೆ ಕಳುಹಿಸಲಾಗಿದೆ.

ಈ) ಈ ಕೆಲಸವು ಜೂನ್ ೧೯೯೧ರ ಅವಧಿಯಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ.— ಮಾನ್ಯ ಅಧ್ಯಕ್ಷರೆ, ನಮ್ಮ ವಿಟ್ಲ ಕ್ಷೇತ್ರ ಗ್ರಾಮಾಂತರ ಪ್ರದೇಶ. ಅಲ್ಲಿ ಜಾಸ್ತಿ ರೈತರಿದ್ದಾರೆ. ಅವರು ನೀರಾವರಿಗಾಗಿ ವಿದ್ಯುಚ್ಛಕ್ತಿ ಪಂಪನ್ನು ಅಳವಡಿಸಿಕೊಂಡು ಕಾಳಿತಿದ್ದಾರೆ. ಸ್ವಿಚ್ ಹಾಕಿದರೆ ಪಂಪು ಚಾಲೂ ಆಗುವುದಿಲ್ಲ. ಹಗಲುಹೊತ್ತು ರನ್ ಪವಾಹವುದಕ್ಕಾಗುವುದಿಲ್ಲ, ರಾತ್ರಿಯ ಹೊತ್ತು ಮಾತ್ರ ರನ್ ಮಾಡಬೇಕಾಗುತ್ತದೆ. ಇದರಿಂದ ನಮ್ಮ ಭಾಗದ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಆ ದೃಷ್ಟಿಯಿಂದ ಅಲ್ಲಿ ವಿದ್ಯುಚ್ಛಕ್ತಿ ಉಪ ಕೇಂದ್ರವನ್ನು ಸ್ಥಾಪಿಸಲು ಕಳೆದ ಆಯವ್ಯಯದಲ್ಲಿ ಪಂಜೂರಾತಿಯಾಗಿದೆ, ಆದರೆ ಇನ್ನೂ ಕೆಲಸ ಪ್ರಾರಂಭವಾಗಿಲ್ಲ. ಇಲ್ಲಿ ತಮ್ಮ ಉತ್ತರದಲ್ಲಿ ವರಾಹಿ ಜಲವಿದ್ಯುತ್ ಯೋಜನೆಯಲ್ಲಿ ಮಂಡಲಿಗೆ ಸಂಬಂಧಿಸಿದ ಕೆಲಸವನ್ನು ನರ್ವಹಿಸಲು ಸಿಬ್ಬಂದಿಯನ್ನು ಕಳುಹಿಸಿದ ಕಾರಣದಿಂದಾಗಿ ಈ ಕೆಲಸ ನಿಧಾನವಾಯಿತು.'' ಎಂದು ಹೇಳಿದ್ದೀರಿ. ಇದನ್ನು ಒಪ್ಪಿಕೊಳ್ಳಬಹುದಾದರೂ ಇವತ್ತು ವಿದ್ಯುತ್ ನಮಗೆ ಬಹಳ ಅವಶ್ಯಕವಾಗಿದೆ. ಮತ್ತು ನನ್ನ (ಈ) ಪ್ರಶ್ನೆಗೆ ಉತ್ತರವಾಗಿ, ಈ ಕೆಲಸವನ್ನು ಜೂನ್ ೧೯೯೧ರ ಅವಧಿಯೊಳಗೆ ಪೂರ್ಣಗೊಳಿಸುವುದಾಗಿ ಹೇಳಿದ್ದೀರಿ. ಅಷ್ಟು ದಿವಸದೊಳಗೆ ಇದನ್ನು ಪೂರ್ಣಗೊಳಿಸುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.— ಈಗ ಇಲ್ಲಿರುವ ಮುಖ್ಯ ಸಮಸ್ಯೆ ಪರಿಹಾರವಾಗಿದೆ. ಬೇಕಾಗಿದ್ದ ಜಾಗ ನಮಗೆ ಸಿಕ್ಕಿದೆ. ಅಲ್ಲಿಗೆ ಬ್ರೇಕರ್ಸ್‌ನ್ನು ಕಳುಹಿಸಲಾಗಿದೆ. ಟ್ರಾನ್ಸ್‌ಫಾರ್ಮರ್ಸ್‌ಗೆ ಆರ್ಡರ್ ಕೊಟ್ಟಿದ್ದೇವೆ. ಟ್ರಾನ್ಸ್‌ಫಾರ್ಮರ್ಸ್ ಬಂದಹಾಗೆ ಆದ್ಯತೆಯ ಮೇಲೆ ನಿಮಗೆ ಕಳುಹಿಸಿ ಮಾಡಿ ಕೊಡುತ್ತೇವೆ.